16

13

**ಕರ್ನಾಟಕ ಸರ್ಕಾರ**

ವಿಷಯ: ನಾಗಮಂಗಲ ತಾಲ್ಲೂಕಿನ ಬೆಳ್ಳೂರು ದಾಸನಕೆರೆಯಿಂದ ಲಿಫ್ಟ್ ಮುಖೇನ ನೀರನ್ನು ಎತ್ತಿ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿಯ ಅಗಚಹಳ್ಳಿ ಕೆರೆ ಹಾಗೂ ಇತರೆ ಎರಡು ಕೆರೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

*****

**ಓದಲಾಗಿದೆ:**

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ರವರ ಪತ್ರ ಸಂ:ಕಾನೀನಿನಿ/ತಾಂತ್ರಿಕ-2/ಯಡಿಯೂರು/ಎಫ್-101/2020-21, ದಿನಾಂಕ:09.11.2020

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರು ವಿಷಯದ ಬಗ್ಗೆ ಪ್ರಸ್ತಾವನೆ ಸಲ್ಲಿಸುತ್ತಾ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕು, ಬೆಳ್ಳೂರು ಹೋಬಳಿ ವ್ಯಾಪ್ತಿಯ ಮಂತನಹಳ್ಳಿ, ಜವರನಹಳ್ಳಿ, ಅಗಚಹಳ್ಳಿ ಗ್ರಾಮಗಳ ಜನ ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಮಂತನಹಳ್ಳಿ ಕಟ್ಟೆ, ಜವರನಹಳ್ಳಿ ಕಟ್ಟೆ ಹಾಗೂ ಅಗಚಹಳ್ಳಿ ಕೆರೆಗಳೇ ಆಶ್ರಯವಾಗಿರುತ್ತದೆ. ಈ ಕೆರೆಗಳಿಗೆ ಮಳೆಯ ನೀರೆ ಆಧಾರವಾಗಿರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಮಳೆಯ ಪ್ರಮಾಣ ಸರಾಸರಿ ಮಟ್ಟಕ್ಕಿಂತ ಕಡಿಮೆಯಿದ್ದರಿಂದ ನೀರಿನ ಒಳಹರಿವು ಕಡಿಮೆಯಾಗಿ ಈ ಕೆರೆಗಳು ಬಹಳ ವರ್ಷಗಳಿಂದ ತುಂಬುತ್ತಿಲ್ಲ. ಇದರಿಂದ ಸುತ್ತಮುತ್ತಲಿನ ಪ್ರದೇಶಗಳ ವ್ಯಾಪ್ತಿಯಲ್ಲಿ ಅಂತರ್ಜಲ ಮಟ್ಟವು ಕುಸಿದಿದ್ದು, ಈ ಪ್ರದೇಶದಲ್ಲಿ ಕೊರೆದಿರುವ ಬಹಳಷ್ಟು ಕೊಳವೆ ಬಾವಿಗಳ ಪೈಕಿ ಕೆಲವೇ ಕೊಳವೆ ಬಾವಿಗಳಲ್ಲಿ ನೀರು ದೊರೆತಿರುತ್ತದೆ. ಮಳೆಯ ಅಭಾವದಿಂದ ಬಹುತೇಕ ಗ್ರಾಮಗಳು ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿವೆ. ಈ ಸಂಬಂಧ ಸದರಿ ಗ್ರಾಮಸ್ಥರು ಕೆರೆಗಳಿಗೆ ನದಿ ಅಥವಾ ಕಾಲುವೆಗಳಿಂದ ಏತ ನೀರಾವರಿ ಮೂಲಕ ತುಂಬಿಸಿಕೊಡಬೇಕೆಂದು ಕೋರಿರುತ್ತಾರೆ ಎಂದು ವರಧಿ ಮಾಡಿರುತ್ತಾರೆ.

2. ಅಲ್ಲದೇ, ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿಯ ಮಂತನಹಳ್ಳಿ ಕಟ್ಟೆ, ಜವರನಹಳ್ಳಿ ಕಟ್ಟೆ ಹಾಗೂ ಅಗಚಹಳ್ಳಿ ಕೆರೆಗಳಿಗೆ ಯಾವುದೇ ನಾಲಾ ನೀರಿನ ಜೋಡಣೆಯಾಗಿರುವುದಿಲ್ಲ. ಈ ಪ್ರದೇಶಕ್ಕೆ ಹೊಂದಿಕೊಂಡಿರುವ ಬಿ.ಜಿ.ನಗರದಲ್ಲಿ ಶ್ರೀ ಆದಿಚುಂಚನಗಿರಿ ವಿಶ್ವವಿದ್ಯಾಲಯ ಹಾಗೂ ಶ್ರೀ ಆದಿಚುಂಚನಗಿರಿ ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿವೆ. ಸಾವಿರಾರು ವಿದ್ಯಾರ್ಥಿಗಳು, ರೋಗಿಗಳು ಹಾಗೂ ಸಾರ್ವಜನಿಕರು ಈ ಆಸ್ಪತ್ರೆಯ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಈ ಸ್ಥಳದಲ್ಲಿಯೂ ಸಹ ಕುಡಿಯುವ ನೀರಿಗಾಗಿ ತುಂಬಾ ಅಭಾವ ಉಂಟಾಗಿರುತ್ತದೆ.

ಪುಟ-2 ಕ್ಕೆ

3. ಡಾ:ನಿರ್ಮಲಾನಂದನಾಥ ಸ್ವಾಮೀಜಿ, ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ ರವರು ದಾಸನಕೆರೆ ಯಿಂದ ಏತ ನೀರಾವರಿಯ ಮೂಲಕ ಮೇಲ್ಕಾಣಿಸಿದ ಗ್ರಾಮಗಳಿಗೆ ಕುಡಿಯುವ ನೀರಿಗಾಗಿ ಕೆರೆಗಳಿಗೆ ನೀರನ್ನು ತುಂಬಿಸುವುದರಿಂದ ಸುತ್ತಮುತ್ತಲಿನ ಜನ, ಜಮೀನು, ಜಾನುವಾರುಗಳಿಗೆ ಅನುಕೂಲವಾಗುತ್ತದೆ ಹಾಗೂ ಅಂತರ್ಜಲವೂ ಉತ್ತಮಗೊಳ್ಳುತ್ತದೆ. ಆದ್ದರಿಂದ ಈ ಕಾಮಗಾರಿಯನ್ನು ನಿರ್ಮಿಸಿಕೊಡಬೇಕೆಂದು ದಿನಾಂಕ:01-07-2020 ರ ಪತ್ರದಲ್ಲಿ ಕೋರಿರುತ್ತಾರೆ ಎಂದು ವರದಿ ಮಾಡಿರುತ್ತಾರೆ.

4. ಈ ಭಾಗದ ನೀರಿನ ಬವಣೆಯನ್ನು ನಿವಾರಿಸಲು ಮತ್ತು ಸಾಮಾಜಿಕ ನ್ಯಾಯ ಒದಗಿಸಲು ಹಾಗೂ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಸಲುವಾಗಿ, ಹೇಮಾವತಿ ಎಡದಂಡೆ ನಾಲೆಯ ಅಡಿಯಲ್ಲಿ ಬರುವ ನಾಗಮಂಗಲ ಶಾಖಾ ನಾಲೆಯ ಸರಪಳಿ 53.95 ಕಿ.ಮೀ.ನಿಂದ ಬೆಳ್ಳೂರು ದಾಸನಕೆರೆಗೆ ಎಸ್ಕೇಪ್ ತೂಬಿನ ಮುಖಾಂತರ ನೀರು ತುಂಬಿಸುವ ವ್ಯವಸ್ಥೆ ಇರುವ ಈ ಕೆರೆಯಿಂದ ಆಗಸ್ಟ್-1 ರಿಂದ ಸೆಪ್ಟೆಂಬರ್-15 ರ ಅವಧಿಯಲ್ಲಿ 45 ದಿನಗಳಲ್ಲಿ 6.05 ಎಂ.ಸಿ.ಎಫ್.ಟಿ. (3 ಕ್ಯೂಸೆಕ್ಸ್) 26.00 ಮೀ ಹೆಡ್ ಗೆ ಎತ್ತಿ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿಯ ಮಂತನಹಳ್ಳಿ ಕಟ್ಟೆ (1.50 ಎಂ.ಸಿ.ಎಫ್.ಟಿ.), ಜವರನಹಳ್ಳಿ ಕಟ್ಟೆ (1.00 ಎಂ.ಸಿ.ಎಫ್.ಟಿ.) ಹಾಗೂ ಅಗಚಹಳ್ಳಿ ಕೆರೆ (3.00 ಎಂಸಿಎಫ್‌ಟಿ) ಗಳನ್ನು ತುಂಬಿಸಲು ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಯಿಂದ ನಾಗಮಂಗಲ ತಾಲ್ಲೂಕು, ಬೆಳ್ಳೂರು ಹೋಬಳಿಯ 10 ಗ್ರಾಮಗಳಾದ ಮಂತನಹಳ್ಳಿ, ಜವರನಹಳ್ಳಿ, ಅಗಚಹಳ್ಳಿ, ಬಿ.ಜಿ.ಪುರ, ಬೆಳ್ಳೂರು, ಉಮರ್ ನಗರ, ಸಯ್ಯದ್ ನಗರ, ಚಾಮಲಾಪುರ, ಬೊಮ್ಮನಹಳ್ಳಿ ಹಾಗೂ ಮಾರುತಿಪುರ ಗ್ರಾಮಗಳ ಪ್ರದೇಶದಲ್ಲಿ ಅಂತರ್ಜಲ ಮಟ್ಟ ಏರಿಕೆಯಾಗುವುದಲ್ಲದೇ ಜನ-ಜಾನುವಾರುಗಳಿಗೆ ನೇರ ಪ್ರಯೋಜನವಾಗುತ್ತದೆ ಎಂದು ವರದಿ ಮಾಡಿರುತ್ತಾರೆ.

5. ಸದರಿ ಯೋಜನಾ ವರದಿಯನ್ನು 2018-19 ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ದರಪಟ್ಟಿ, ಜಲಸಂಪನ್ಮೂಲ ಇಲಾಖೆಯ 2018-19 ನೇ ಸಾಲಿನ ದರಪಟ್ಟಿ, ಲೋಕೋಪಯೋಗಿ ಮೈಸೂರು ವೃತ್ತದ 2018-19 ನೇ ಸಾಲಿನ ದರಪಟ್ಟಿ, ಸಣ್ಣ ನೀರಾವರಿ ಇಲಾಖೆಯ 2018-19 ನೇ ಸಾಲಿನ ದರಪಟ್ಟಿ, 2019-20 ನೇ ಸಾಲಿನ ಲೋಕೋಪಯೋಗಿ ಇಲಾಖೆಯ (ವಿದ್ಯುತ್) ದರಪಟ್ಟಿ, 2018-19 ನೇ ಸಾಲಿನ ಎಸ್ಕಾಂ ದರಪಟ್ಟಿ ಮತ್ತು ಮಾರುಕಟ್ಟೆ ದರಗಳನ್ನು ಅಳವಡಿಸಿ ತಯಾರಿಸಲಾಗಿರುತ್ತದೆ.

6. ಸದರಿ ಯೋಜನಾ ವರದಿಗೆ ದಿನಾಂಕ:31.07.2020 ರಂದು ನಡೆದ ಅಂದಾಜು ಪರಿಶೀಲನಾ ಸಮಿತಿಯ 9ನೇ ಸಭೆಯಲ್ಲಿ ತೆರವು ನೀಡಲಾಗಿದೆ ಮತ್ತು ದಿನಾಂಕ:05.10.2020 ರಂದು ನಡೆದ ನಿಗಮ ಮಂಡಳಿಯ 72ನೇ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ.

7. ಸದರಿ ಕಾಮಗಾರಿಯನ್ನು 2020-21 ನೇ ಸಾಲಿನ ಹೇಮಾವತಿ ನಾಲಾ ವಿಭಾಗ, ಎಡಿಯೂರು ವಿಭಾಗದ ವಾರ್ಷಿಕ ಕಾರ್ಯಕ್ರಮ ಪಟ್ಟಿಯ ಹೊಸ ಕಾಮಗಾರಿಗಳಡಿಯಲ್ಲಿ ರೂ.10.00 ಲಕ್ಷಗಳ ಸಾಂಕೇತಿಕ ಅನುದಾನದೊಂದಿಗೆ ಸೇರಿಸಿಕೊಳ್ಳಲಾಗಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರು ವರದಿಕರಿಸಿರುತ್ತಾ, ಸದರಿ ಕಾಮಗಾರಿಯ ರೂ.9.90 ಕೋಟಿ ಮೊತ್ತದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿರುತ್ತಾರೆ.

ಪುಟ-3 ಕ್ಕೆ

8. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಜಸಂಇ 117 ಎನ್‌ಹೆಚ್‌ಪಿ 2020,**

**ಬೆಂಗಳೂರು, ದಿನಾಂಕ:13.01.2021**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ನಾಗಮಂಗಲ ತಾಲ್ಲೂಕಿನ ಬೆಳ್ಳೂರು ದಾಸನಕೆರೆಯಿಂದ ಲಿಫ್ಟ್ ಮುಖೇನ ನೀರನ್ನು ಎತ್ತಿ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಹೋಬಳಿಯ ಅಗಚಹಳ್ಳಿ ಕೆರೆ ಹಾಗೂ ಇತರೆ ಎರಡು ಕೆರೆಗಳನ್ನು ಕುಡಿಯುವ ನೀರಿಗಾಗಿ ತುಂಬಿಸುವ ಕಾಮಗಾರಿಯ ರೂ.9.90 ಕೋಟಿ ಮೊತ್ತದ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಈ ಆದೇಶವನ್ನು, ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ:ಆಇ/412/ಆಕೋ-1/2020, ದಿನಾಂಕ:13.01.2021 ರಲ್ಲಿ ನೀಡಿರುವ ಸಹಮತಿ, ಹಾಗೂ ಆದೇಶ ಸಂಖ್ಯೆ:ಆಇ 01 ಟಿಎಫ್‌ಪಿ 2020, ದಿನಾಂಕ:13.01.2020ರ ಕಂಡಿಕೆ-3 ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

**ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ**
**ಹಾಗೂ ಅವರ ಹೆಸರಿನಲ್ಲಿ,**

13/01/2021

**( ಮನೋಹರ ವೈ. ರೊಟ್ಟೆ )**
**ಸರ್ಕಾರದ ಅಧೀನ ಕಾರ್ಯದರ್ಶಿ (ತಾಂ-2)**
**ಜಲಸಂಪನ್ಮೂಲ ಇಲಾಖೆ**

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕ ಪರಿಶೋಧನ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿರವರ ಆಪ್ತಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
5. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
6. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರು.
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

+++++

ಕರ್ನಾಟಕ ಸರ್ಕಾರ

ಸಂಖ್ಯೆ:ಜಸಂಇ 4 ಎನ್‌ಪಿಸಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:13/01/2021.

:: **ಅಧಿಸೂಚನೆ** ::

**ಶ್ರೀ ಪಿ.ರವಿಕುಮಾರ್, ಭಾ.ಆ.ಸೇ.,** ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಇವರನ್ನು ಕಾವೇರಿ ನೀರಾವರಿ **ನಿಗಮ ನಿಯಮಿತದ** ಮೆಮೊರಾಂಡಮ್ ಅಂಡ್ ಆರ್ಟಿಕಲ್ಸ್ ಆಫ್ ಅಸೋಸಿಯೇಷನ್‌ನ ಆರ್ಟಿಕಲ್ 147(ಸಿ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ದಿನಾಂಕ:31/12/2020ರ ಅಪರಾಹ್ನದಿಂದಲೇ ಜಾರಿಗೆ ಬರುವಂತೆ ಕಾವೇರಿ ನೀರಾವರಿ ನಿಗಮ ನಿಯಮಿತದ ನಿರ್ದೇಶಕರ ಮಂಡಳಿಯ ನಿರ್ದೇಶಕರಾಗಿದ್ದ ಶ್ರೀ ಟಿ.ಎಂ. ವಿಜಯ ಭಾಸ್ಕರ್, ಭಾ.ಆ.ಸೇ., ಇವರ ಸ್ಥಾನದಲ್ಲಿ ನಾಮನಿರ್ದೇಶನ ಮಾಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
13/1/2021
**(ರವೀಂದ್ರ ಕೊಂಡ)**
ಸರ್ಕಾರದ ಅಧೀನ ಕಾರ್ಯದರ್ಶಿ(ತಾಂತ್ರಿಕ–5)
ಜಲ ಸಂಪನ್ಮೂಲ ಇಲಾಖೆ

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಮೈಸೂರು ರಸ್ತೆ, ಬೆಂಗಳೂರು, ಇವರಿಗೆ ಕಳುಹಿಸಿಕೊಡುತ್ತಾ, ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ, ಪ್ರಕಟಿಸಿದ 25 ಪ್ರತಿಗಳನ್ನು ಕಳುಹಿಸಿಕೊಡಬೇಕಾಗಿ ಕೋರಿದೆ.

ಪ್ರತಿಗಳು:

1. ಮಹಾಲೇಖಪಾಲರು (ಆಡಿಟ್ 1 ಮತ್ತು 2), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನಸೌಧ.
6. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
7. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
8. ಸರ್ಕಾರದ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಸರ್ಕಾರದ ಕಾರ್ಯದರ್ಶಿಗಳು, ಸಿ ಆ ಸು ಇಲಾಖೆ, ವಿಧಾನ ಸೌಧ, ಬೆಂಗಳೂರು.
10. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
11. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
12. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
13. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
14. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು.
15. ಹೆಚ್ಚುವರಿ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು.
16. ಸರ್ಕಾರದ ಉಪ ಕಾರ್ಯದರ್ಶಿ, (ಬಿ & ಆರ್), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
17. ಸರ್ಕಾರದ ಉಪ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ (ಕೃಭಾಜನಿ) ವಿಕಾಸಸೌಧ.
18. ಶಾಖಾ ರಕ್ಷಕ ಕಡತ/ಹೆಚ್ಚುವರಿ ಪ್ರತಿಗಳು